# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 710 (681) |
| ಸದಸ್ಯರ ಹೆಸರು | ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18.08.2025 |
| ಉತ್ತರಿಸುವವರು | ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಾವು ಕಡಿತವನ್ನು ಘೋಷಿತ ಖಾಯಿಲೆಯೆಂದು ಘೋಷಣೆ ಮಾಡಿದ್ದು ಯಾವಾಗ; ಘೋಷಿತ ಕಾಯಿಲೆ ಎಂದು ಘೋಷಣೆ ಮಾಡಿದ ನಂತರ ವರದಿಯಾಗಿರುವ ಪ್ರಕರಣಗಳು ಎಷ್ಟು; | ಅರಣ್ಯ ಇಲಾಖೆಯಿಂದ ಹಾವು ಕಡಿತವನ್ನು ಘೋಷಿತ ಖಾಯಿಲೆಯೆಂದು ಘೋಷಣೆ ಆದೇಶ ಆಗಿರುವುದಿಲ್ಲ. |
| ಆ) | ಹಾವು ಹಿಡಿಯಲು ಸರ್ಕಾರ ಸಿಬ್ಬಂದಿಗಳನ್ನು ಅಥವಾ ಸಂಸ್ಥೆಗಳನ್ನು ನೇಮಕ ಮಾಡಿಕೊಂಡಿದೆಯೇ; ಎಷ್ಟು ಸಂಸ್ಥೆಗಳು ಅಥವಾ ವ್ಯಕ್ತಿಗಳು ಹಾವು ಹಿಡಿಯಲು ನೋಂದಣಿ ಮಾಡಿಕೊಂಡಿರುತ್ತಾರೆ; | ಉರಗಗಳಲ್ಲಿ ಕೆಲವೊಂದು ಪ್ರಭೇದಗಳು ವನ್ಯಜೀವಿ ಸಂರಕ್ಷಣಾ ಕಾಯ್ದೆ, 1972ರ ಷೆಡ್ಯೂಲ್ 1 ಹಾಗೂ 2 ರ ಪರಿವ್ಯಾಪ್ತಿಯಲ್ಲಿ ಬರುತ್ತದೆ. ಅರಣ್ಯ ಇಲಾಖೆಯಲ್ಲಿ ಮಾನವ-ಹಾವುಗಳ ಸಂಘರ್ಷ, ನಿರ್ವಹಣೆ ಮತ್ತು ಉಪಶಮನ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಒಂದು ಕೈಪಿಡಿ (SOP) ಇರುತ್ತದೆ.<br><br>ಸದರಿ ಕೈಪಿಡಿ ಮಾರ್ಗಸೂಚಿಯನ್ವಯ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಈಗಾಗಲೇ ಉರಗ ರಕ್ಷಣೆಯಲ್ಲಿ ಗುರುತಿಸಿಕೊಂಡಿರುವ/ಪಾಲ್ಗೊಳ್ಳುತ್ತಿರುವವರಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿ, ತರಬೇತಿಯಲ್ಲಿ ಪಾಲ್ಗೊಂಡವರ ಅರ್ಹತೆ, ಕಾರ್ಯಕ್ಷಮತೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ತೃಪ್ತಿಕರವೆಂದು ಕಂಡುಬಂದಲ್ಲಿ, ಉರಗ ರಕ್ಷಣೆಯಲ್ಲಿ/ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಳ್ಳುವ ಸಲುವಾಗಿ, ಅಂತಹವರಿಂದ ದೃಢೀಕರಣ (Due Undertaking) ಪಡೆದು, ಪ್ರಮಾಣೀಕರಿಸುವಂತೆ (Certify) ಎಲ್ಲಾ ವೃತ್ತಾಧಿಕಾರಿಗಳಿಗೆ ನಿರ್ದೇಶಿಸಲಾಗಿದೆ. ಉರಗ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡವರಿಗೆ ತರಬೇತಿ ನೀಡಲಾಗುತ್ತಿದೆ.<br><br>ಹಾವು ಕಡಿತಕ್ಕೆ ಒಳಗಾಗಿ ಮೃತಪಟ್ಟಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 49 ಎಂಎಸ್‌ಟಿ 2020(ಇ) ದಿನಾಂಕ 26-08-2020 ರಲ್ಲಿ ಕೃಷಿ ಇಲಾಖೆಯಿಂದ ಪರಿಹಾರ ಧನ ಪಾವತಿಸಲಾಗುತ್ತಿದೆ. |
| ಇ) | ಜೀವ ಪಣಕ್ಕಿಟ್ಟು ಹಾವು ಹಿಡಿಯುವವರಿಗೆ ಸರ್ಕಾರ ಗೌರವ ಧನ ಅಥವಾ ಭತ್ಯೆ ನೀಡುತ್ತಿದೆಯೇ; ಹಾವು ಹಿಡಿಯುವಾಗ ಮೃತಪಟ್ಟವರ ವಿವರ ನೀಡುವುದು; ಇವರಿಗೆ ಸರ್ಕಾರ ಪರಿಹಾರ ನೀಡಿದೆಯೇ? | |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| | | ಅರಣ್ಯ ಇಲಾಖೆಯಲ್ಲಿ ಇಲಾಖೆಯ ಸಿಬ್ಬಂದಿ ಹೊರತು ಯಾವುದೇ ವನ್ಯಜೀವಿ ರಕ್ಷಕರನ್ನು ಪ್ರತ್ಯೇಕವಾಗಿ ನೇಮಿಸಿರುವುದಿಲ್ಲ. |

ಇ-ಸಂಖ್ಯೆ: ಅಪಜೀ 190 ಎಫ್‌ಡಬ್ಲ್ಯೂಎಲ್ 2025

ಈಶ್ವರ ಬಿ. ಖಂಡ್ರೆ
ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು